ಇ) ಹೆಂಡದಲ್ಲಿ ಅಕ್ರಮವಾಗಿ ಅನೇಕ ರಾಸಾಯನಿಕ ಪದಾರ್ಥಗಳನ್ನು ಕಲಸಿ ಕಲಬೆರಕೆ ಮಾಡಿ ಹೆಂಡ ಕುಡಿಯುವವರ ಆರೋಗ್ಯಕ್ಕೆ ಹಾನಿ ಮಾಡುತ್ತಿರುವುದಾಗಿ ದೂರುಗಳು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಈ) ಈ ಕಲಬೆರಕೆಯನ್ನು ತಡೆಹಿಡಿಯಲು ಮತ್ತು ಹೆಂಡ ಕುಡಿಯುವವರ ಆರೋಗ್ಯ ಕಾಪಾಡಲು ನಿರ್ದಿಷ್ಟ ಕ್ರಮಗಳನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆಯೆ ?

ಉ) ಈ ಬಗ್ಗೆ ಎಷ್ಟು ಮೊಕದ್ದಮೆಗಳನ್ನು ಹಾಕಲಾಗಿದೆ ಹಾಗೂ ಎಷ್ಟು ಪರವಾನಗಿಗಳನ್ನು ರದ್ದುಪಡಿಸಲಾಗಿದೆ ?

ಶ್ರೀ ರಮೇಶ್ ಜಿಗಜಿಣಗಿ (ಅಬಕಾರಿ ರಾಜ್ಯ ಸಚಿವರು).—

ಅ) ೪೮.೨೮ ಕೋಟಿ ರೂಪಾಯಿಗಳು (೧೯೮೫–೮೬ರ ಅಬ್ಕಾರಿ ವರ್ಷಕ್ಕೆ).

ಆ) ಸುಮಾರು ೧೮ ಕೋಟಿ ಲೀಟರ್.

ಇ) ಇಲ್ಲ.

ಈ) ಕಲಬೆರಕೆಯನ್ನು ತಡೆಹಿಡಿಯಲು ಮತ್ತು ಹೆಂಡ ಕುಡಿಯುವವರ ಆರೋಗ್ಯ ಕಾಪಾಡಲು ನಿಯತಕಾಲಿಕವಾಗಿ ಹೆಂಡವನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿ ವಿತರಣೆ ಮಾಡಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಉ) ಈವರೆಗೆ ೩ ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ ಮಂತ್ತು ಯಾವ ಪರವಾನಗಿಗಳನ್ನೂ ರದ್ದು ಪಡಿಸಿರುವುದಿಲ್ಲ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಮುದ್ರಣ ಕಾರ್ಯಗಳಿಗಾಗಿ ಖರ್ಚು ಮಾಡಿರುವುದರ ಬಗ್ಗೆ

೫೧೨ ಶ್ರೀ ಬಿ. ಎ. ಉಮ್ಮರಬ್ಬ (ವಿಟ್ಲ).–ಮಾನ್ಯ ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಸ್ಥಾಪನೆಯಾದಾಗಿನಿಂದ ಇಲ್ಲಿಯವರೆಗೆ ಮುದ್ರಣ ಕಾರ್ಯಗಳಿಗಾಗಿ ಖರ್ಚು ಮಾಡಿದ ಹಣ ಎಷ್ಟು?

ಆ) ವಿದ್ಯುಚ್ಛಕ್ತಿ ಮಂಡಳಿಯು ತನ್ನದೇ ಆದ ಸ್ವಂತ ಮುದ್ರಣಾಲಯವನ್ನು ಹೊಂದಲು ಇರುವ ತೊಂದರೆ ಏನು?

ಶ್ರೀ ಜೆ. ಎಚ್. ದೇಶ್‌ಮುಖ್ (ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).–

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ೧೯೫೬–೫೭ನೇ ಸಾಲಿನಿಂದ ೩೧–೦೨–೮೫ರವರೆಗೆ ಮುದ್ರಣಕ್ಕಾಗಿ ೫೯೬.೭೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದೆ.

ಆ) ವಿದ್ಯುಚ್ಛಕ್ತಿ ಮಂಡಲಿಯು ತನ್ನದೇ ಆದ ಸ್ವಂತ ಮುದ್ರಣಾಲಯವನ್ನು ಹೊಂದುವುದು ಆರ್ಥಿಕವಾಗಿ ಲಾಭದಾಯಕವಲ್ಲವೆಂದು ಪರಿಗಣಿಸಲಾಗಿದೆ ಮತ್ತು ಇದರಿಂದ ಆಡಳಿತ ತೊಡಕುಗಳೂ ಸಹ ಉಂಟಾಗಬಹುದು.

ಹೊಸದುರ್ಗ ತಾಲ್ಲೂಕು ಮಾಡದ ಕೆರೆ ಹೋಬಳಿ ದೇವಪುರದಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿರುವ ಬಗ್ಗೆ

೯೮ ಶ್ರೀ ಜಿ. ರಾಮದಾಸ್ (ಹೊಸದುರ್ಗ) ಮಾನ್ಯ ಕಂದಾಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸದುರ್ಗ ತಾಲ್ಲೂಕು ಮಾಡದ ಕೆರೆ ಹೋಬಳಿ ದೇವಪುರ ರಿ.ಸ. ನಂ. ೧೫೫ರಲ್ಲಿ ಸಾಗುವಳಿಗಾಗಿ ಎಷ್ಟು ಎಕರೆ ಜಮೀನು ರಿಲೀಜ್ ಆಗಿದೆ?